Rega No M 1229 | 43rd Year | Sri 'Satyavadi' Mysore | 9—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸ್ಥಾಪಕರು— ಆರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಕಮ್ಮನು [ಬಿಡಿ ಪ್ರತಿ ೩ಪೈ]

ನೇನಾ ಒಪಂದ ಬಗೆ ಅಮೇರಿಕಾ, ಪಾಕ್ ನಿಲುವಿನಲಿ ಒಮತವಿಲ

ಮುನಿಸಿಪಲ್ ಕಮಿಷನರ ವಿನಂತಿ

ಮೈಸೂರು — ಜನತೆಯ ಆರೋಗ್ಯಕ್ಕೆ ಹಾನಿಕರವಾದ ಕೊಳ್ಳು ಹಣ್ಣುಗಳು, ಐಸ್‌ಕ್ಯಾಂಡಿ, ಒಳ್ಳೆಯದಲ್ಲದ ತಿಂಡಿ ಮುಂತಾವುಗಳ ವಾಂತಾಟವನ್ನು ಸ್ಕೂಲುಗಳ ಹತ್ತಿರ ಮತ್ತು ಇತರ ಕಡೆಗಳಲ್ಲಿ ತಪ್ಪಿಸಲು ದಿನ ಒಂದು ಬಾರಿ ಅಬ್ಜೆಲ್ಟಾ ಸುತ್ತಿ ಅವುಗಳನ್ನೆಲ್ಲಾ ಶೇಖರಿಸಿ ನಾಶಮಾಡಲಾಗುವುದು ಜನರು ಸಹಕರಿಸಬೇಕೆಂದೂ ಮುನಿಸಿಪಲ್ ಕಮಿಷನರು ವಿನಂತಿಸಿದ್ದಾರೆ

ಶ್ರೀ ಬಾಲಾಜಿ ಯಾತ್ರಾ ಕಂ

ಬೆಂಗಳೂರು ಸಿಟಿ ಸ್ಟೇಷನ್‌ನಿಂದ
ತಾ|| 12-4-59 ರಲ್ಲಿ ಹೊರಡುವ
ಶ್ರೀ ಬದರೀ-ಕೇದಾರ್-ಕಾಶ್ಮೀರ್
ಕಾಶೀ ಮತ್ತು ಉ|| ಭಾರತ
ಸಂಪೂರ್ಣ ಯಾತ್ರೆ

1st ಕ್ಲಾಸ್ ಟೂರಿಸ್ಟ್ ಮತ್ತು ಜನತಾ
ಕ್ಯಾರೇಜ್‌ಗಳಲ್ಲಿ ಸೀಟುಗಳಿವೆ

— ವಿವರಗಳಿಗೆ —

ಶುಭಾ ಶಾಸ್ತ್ರಿ (ಫೋನ್ 3910)
ಬದರೀನಾಥ್ ಹನುಮಂತಯ್ಯ ಡಬ್ಬಲ್
ಕಾಂಗ್ರೆಸ್ ಬಿ, ಬೆಂಗಳೂರು – 2

ಬಗ್ಗೆ ಪ್ರಾಗು... ip for Badri or
ಯಾತ್ರೆ ಬರಿಸಿ... sion on 2nd May
ಗಿದೆ ಅಂದ...
ಅದೂ ಆಫೀಸಿಗೆ

ಜಳುವಂ

ವಾರ್ಸಾ 8 — ಪಾಕಿಸ್ತಾನಕ್ಕೆ ಹೆಲಿಕಾಪ್ಟರ್‌ಗಳನ್ನು ಅಗುವದರ ವಿರುದ್ಧ ಭಾರತೀಯ ಜನಸಂಘ ಚಳವಳಿ ಹೂಡಲಿದೆ.

ಶ್ರೀರಂಗಪಟ್ಟಣ 8 — ಈ ನಾಧ್ಯಾ... ವರೆಗೆ ಗಣಿಗೆ ಸಮಂ ನಿರೋಧ... ದ್ದವಾಯಿತು

ನವ ದೆಹಲಿ 8 — ಭಾರತದ ಮೇಲಿನ ಆಕ್ರಮಣಕ್ಕೆ ಅಮೇರಿಕಾ-ಪಾಕಿ ಸ್ತಾನ ದ್ವಿಮುಖ ಸೇನಾ ಒಪ್ಪಂದದಲ್ಲಿ ಅವಕಾಶವಿಲ್ಲವೆಂದು ವಾಷಿಂಗ್ಟನ್ನಿನಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಸಂಸ್ಥಾನ ಶಾಖೆಯ ಪ್ರಮುಖ ಲಿಂಕನ್ ವೈಟ್ ತಿಳಿಸಿದ್ದಾರೆ ಪಾಕಿಸ್ತಾನ ಸುದ್ದಿ ಇಲಾಖೆಯ ಮಂತ್ರಿ ಹಬೀಬುಲ್ ರೆಹಮಾನರು ಅಲಹೋರಿನಲ್ಲಿ ಹೇಳಿಕೆಯಿತ್ತು, ಈಗ ಪ್ರಕಟವಾಗಿರುವ ಒಪ್ಪಂದದಿಂದ ನಾವೇನೂ ದೂರಹೋಗಬೇಕಾದದಿಲ್ಲ ವೆಂದು ತಿಳಿಸಿದರು ಒಪ್ಪಂದದಲ್ಲಿ ಕಮ್ಯುನಿಸ್ಟರು ಎಂಬ ಪದ ಬಂದಿಲ್ಲವೆಂದು ಅವರು ತಿಳಿಸಿದರು ಎರಡು ದೇಶಗಳ ಒಪ್ಪಂದವಾಗಿರುವ ಆದರಂತೆ ನಾವು ನಡೆಯುತ್ತೇವೆ ಎಂದವರು ತಿಳಿಸಿದರು

ಅಮೇರಿಕಾ ಹೇಳಿಕೆಗೆ ಬದ್ಧರಲ್ಲ

ಕಂಚಿ 7 — ಯಾವುದೇ ಭಾಗದಿಂದ ಆಕ್ರಮಣ ನಡೆದರು ಅದನ್ನು ಅಮೇರಿಕಾದೊಡನೆ ಆಗಿರುವ ಒಪ್ಪಂದದ ಪ್ರಕಾರ ಎದುರಿಸಲಾಗುವದೆಂದು ಪಾಕಿಸ್ತಾನ ವಿದೇಶ ಕಾರ್ಯದರ್ಶಿ ಎಸ್ ಎ ಬೇಗ್ ಹೇಳಿರುವದನ್ನು ಪಾಕಿಸ್ತಾನ ರೇಡಿಯೋ ಪ್ರಸಾರಮಾಡಿದೆ ಭಾರತಕ್ಕೆ ಅಮೇರಿಕಾ ಕೊಡುವ ಉತ್ತರಕ್ಕೆ ಪಾಕಿಸ್ತಾನ ಸಂಬಂಧಿಸಿಲ್ಲವೆಂದು ತಿಳಿಸಲಾಗಿದೆ

ಕಲಹ ಬೇಡ

ನವ ದೆಹಲಿ 8 — ಸರ್ಕಾರಿ ಕ್ಷೇತ್ರದ ಮೇಲೆ ಖಾಸಗಿ ವ್ಯಾಪಾರ ಕ್ಷೇತ್ರ ಪ್ರಚ್ಛನ್ನ ಯುದ್ಧ ಹೂಡಿರುವದನ್ನು ನಿಲ್ಲಿಸಬೇಕೆಂದು ಭಾರತ ಸರ್ಕಾರದ ಒಳಾಡಳಿತ ಮಂತ್ರಿ ಶ್ರೀ ಗೋವಿಂದ ವಲ್ಲಭಪಂತರು ತಿಳಿಸಿದ್ದಾರೆ. ಸರ್ಕಾರದೊಡನೆ ಖಾಸಗಿಯವರು ಸಹಕರಿಸಬೇಕೆಂದು ಅವರು ತಿಳಿಸಿದ್ದಾರೆ.

ಪ್ರತಿಭಟಿಸಿ

ನವ ದೆಹಲಿ 8 — ಅಖಿಲ ಭಾರತ ಕಮ್ಯುನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ್‌ಘೋಷರು ಹೇಳಿಕೆಯಿತ್ತು, ಪಾಕಿಸ್ತಾನ ಮತ್ತು ಅಮೇರಿಕಾದ ದ್ವಿಮುಖ ಒಪ್ಪಂದದ ಬಗ್ಗೆ ಭಾರತ ಸರ್ಕಾರ ಪ್ರತಿಭಟಿಸಬೇಕೆಂದು ತಿಳಿಸಿರುವರು.

ಉಪಗ್ರಹ ಪ್ರಗತಿ

ಮಾಸ್ಕೋ — 9 ವರೆ ತಿಂಗಳಲ್ಲಿ ರಷ್ಯದ ಉಪಗ್ರಹವು 4 ಸಾವಿರ ಸುತ್ತು ಸುತ್ತಿದೆ ಅದು ಒಟ್ಟು 18.5 ಕಿಲೋ ಮೀಟರುಗಳಷ್ಟು ಸುತ್ತಿದೆ

ಮುಷ್ಕಾಯ ಸಮಾರಂಭ

ಕೊಳ್ಳೇಗಾಲದ ಸರ್ಕಾರಿ ಪ್ರೌಢ ಶಾಲಾ ವಿದ್ಯಾರ್ಥಿ ಸಂಘದ ಮುಷ್ಕಾಯ ಸಮಾರಂಭ 6 ನೇ ತಾ|| ಸಂಜೆ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿಯವರ ಅಧ್ಯಕ್ಷತೆಯಲ್ಲಿ ನೆಂವೇರಿತು

ಭಯ ಬೇಡ

ನವ ದೆಹಲಿ 8 — ಜನಸಂಖ್ಯೆ ಏರಿಕೆಯ ಬಗ್ಗೆ ಗಾಭರಿ ಬೀಳಬೇಕಾಗಿಲ್ಲವೆಂದು ಮಂತ್ರಿ ಶ್ರೀ ಡಿ ಪಿ ಕರಮಕರ್ ತಿಳಿಸಿದ್ದಾರೆ.

ಕೈರೋಗೆ ಕೃಶ್ಚೇವ್

ಕೈರೊ 8 — ಚೀನಾದ ಉನ್ನತ ವ್ಯಕ್ತಿಯೊಂದಿಗೆ ರಷ್ಯದ ಪ್ರಧಾನಿ ಕೃಶ್ಚೇವರು ಭೇಟಿಕೊಡುವರೆಂದು ಆಲ್ ಸಾಬ್ ಪ್ರಕಟಿಸಿದೆ

ಮೆಕ್ಸಿಕೊ ನಗರ 8 — ಕೈಗಾರಿಕ ಅಲ್ಕೋಹಾಲು ಕುಡಿದ ಕಾರಣ 26 ಜನರು ಮರಣಹೊಂದಿದರು

ಕೇಂದ್ರ ಶಾಸನ ಆಗಲಿ

ನವ ದೆಹಲಿ 8 — ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷ ನಾಗ್ಪುರ ಭೂ ಸುಧಾರಣೆ ನಿರ್ಣಯಗಳಿಗೆ ಸಾಮಾನ್ಯ ಅನುಮೋದನೆ ಇತ್ತಿದೆ ಎಂದು ಗೊತ್ತಾಗಿದೆ ಭೂಮಿತಿ ಇರಬೇಕೆಂದು ಸದಸ್ಯರು ತಿಳಿಸಿ, ಅದು ಕೇಂದ್ರದ ನಿರ್ದೇಶನದಂತೆ ಅದು ಆಗಬೇಕೆಂದು ಅವರು ತಿಳಿಸಿದರು

ನಿಯೋಗದ ಆಗಮನ

ಬೆಂಗಳೂರು 8 — ರಷ್ಯ ನಿಯೋಗದ ನಾಯಕ ಎ ಎ ಅಂಡ್ರೆಯಿ ಮತ್ತು ಸೌಹಾರ್ದ ನಿಯೋಗದ ಸದಸ್ಯರನ್ನು ಮುಖ್ಯ ಮಂತ್ರಿ ಶ್ರೀ ಬಿ. ಡಿ ಜತ್ತಿ ಮತ್ತು ಮೇಯರಾದ ಶ್ರೀ ಎಕ್ ನಾರಾಯಣ ಶೆಟ್ಟಿ ಸ್ವಾಗತಿಸಿದರು

ನಿರಾಕರಣೆ

ಕಂಚಿ 8 — ಭಾರತ-ಪಾಕಿಸ್ತಾನ ಗಡಿ ಘಟನೆಗಳಲ್ಲಿ ಪಾಕಿಸ್ತಾನ ಅಮೇರಿಕಾ ಅಸ್ತ್ರಗಳನ್ನು ಉಪಯೋಗಿಸಿಲ್ಲವೆಂದು ಪಾಕಿಸ್ತಾನ ವಿದೇಶ ಇಲಾಖೆಯ ಪ್ರಮುಖನೋರ್ವನು ತಿಳಿಸಿದನು.

ನಾಳೆಯ ಹರಿಜಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂದಕೃಷ್ಣ ಜೋಯಿಸರಿಂದ

10 ಪ್ರಥಮ ಪೂರ್ವಾಭಾದ್ರ

× ನವ ದೆಹಲಿ 8 — ಅಣು ಅಸ್ತ್ರಗಳನ್ನು ನಿಷೇಧ ಮಾಡಬೇಕೆಂದು ಭಾರತ ಪಾರ್ಲಿಮೆಂಟಿನ ಮಹಿಳಾ ಸದಸ್ಯರು ವಿಶ್ವಸಂಸ್ಥೆಗೆ ಮನವಿ ಮಾಡಿದ್ದಾರೆ

× ಜುಲೈ 1 ರಿಂದ ಸಿಂಡಳದಲ್ಲಿ ಟ್ರಾಂ ವೇ ಸೇವೆ ನಿಲ್ಲುವುದು 60 ವರ್ಷಗಳಿಂದ ಟ್ರಾಂ ವೇ ಇತ್ತು

ಭಾರತಕ್ಕೆ ನಾಸೆರ್ ಭೇಟಿ

ನವದೆಹಲಿ 6— ಸಂಯುಕ್ತ ಅರಬ್ ಪ್ರಜಾಪ್ರಭುತ್ವದ ಅಧ್ಯಕ್ಷ ನಾಸರ್ ರವರು ಈ ವರ್ಷದ ಕಡೆಯಲ್ಲಿ ಭಾರತಕ್ಕೆ ಭೇಟಿ ಕೊಡುವ ನಿರೀಕ್ಷಣೆ ಇದೆ.

ಚಳವಳಿ ನಿಲ್ಲಲಿ

ಬೆಂಗಳೂರು 6— ಗಡಿ ಸಮಸ್ಯೆ ಬಗ್ಗೆ ಮಾತುಕತೆಗಳು ಡೆಲ್ಲಿಯಲ್ಲಿ ಏಪ್ರಿಲ್ ಮೊದಲನೇ ವಾರ ಅಥವಾ ಅದಕ್ಕೆ ಮುಂಚಿತವಾಗಿ ನಡೆಯಲಿದೆಯೆಂದು ಹೇಳಿ, ಮಹಾಂತಾಷ್ಟ್ರ ಏಕೀಕರಣ ಸಮಿತಿಯವರು ತಮ್ಮ ಚಳವಳಿಯನ್ನು ಮುಕ್ತಾಯಗೊಳಿಸಲು ಮುಖ್ಯ ಮಂತ್ರಿ ಶ್ರೀ ಜತ್ತಿಯವರು ಏನಂತಿಸಿದರು.

ಭಾರತದ ವ್ಯಾಪಾರಸಂಸ್ಥೆಗಳ ಆರ್ಡರುಗಳು

ಬರ್ಲಿನ್ 5— ಲಿವ್‌ಜಿಗ್‌ನ ವಸಂತ ಋತುವಿನ ಸಂತೆಯಲ್ಲಿ ಭಾರತದ ವ್ಯಾಪಾರಸಂಸ್ಥೆಗಳು 9 ಮಿಲಿಯ ರೂಪಾಯಿಗೂ ಹೆಚ್ಚಾಗಿ ಆರ್ಡರು ಕೊಟ್ಟಿರುವ ರೆಂದು ವರದಿಯಾಗಿದೆ.

ಭಾರತಕ್ಕೆ ವಿಮಾನಲಾದ ಸಂಚಿಕೆ

ವಾಷಿಂಗ್ಟನ್ 4— ಪ್ರಪಂಚ ವ್ಯವಹಾರಗಳ ಮಾಸಪತ್ರಿಕೆಯಾದ 'ಕರೆಂಟ್ ಹಿಸ್ಟರಿ' ತನ್ನ ಮಾರ್ಚಿ ಸಂಚಿಕೆಯನ್ನು ಭಾರತಕ್ಕೆ ವಿಮಾನಲು ಮಾಡಿದೆ — ಪೂರ್ವ-ಪಶ್ಚಿಮಗಳ ನಡುವಿನ ಭಾರತ, ಎಂಬ ಹೆಸರಿನ ಈ ಸಂಚಿಕೆಯಲ್ಲಿ ಭಾರತದ ಮತ್ತು ಅಮೇರಿಕಾದ ಸುಪ್ರಖ್ಯಾತ ವ್ಯಕ್ತಿಗಳ 7 ಲೇಖನಗಳಿವೆ.

ದೇಶಗಳು ಎದುರಿಸಬೇಕಾಗಿರುವ ಸಮಸ್ಯೆ — ಪೌಷ್ಟಿಕ ಆಹಾರದ ಅಭಾವ

ಪ್ರಪಂಚದ ಜನಸಂಖ್ಯೆಯು ದಿನೇದಿನೇ ಹೆಚ್ಚುತ್ತಾ ಇದೆ; ಪ್ರತಿನಿತ್ಯವೂ ಸುಮಾರು 1 ಲಕ್ಷ ಮಕ್ಕಳು ಹುಟ್ಟುತ್ತಿವೆ! ಇವುಗಳಲ್ಲಿ ಮೂರನೆಯ ಎರಡು ಭಾಗದಷ್ಟು ಮಕ್ಕಳಿಗೆ ಪುಷ್ಟಿಕರ ಆಹಾರವು ದೊರೆಯುವ ಸಂಭವವು ಬಹಳ ಕಡಮೆ. ಇಂತಹ ಮಕ್ಕಳು ಈಗಲೇ ಜನಸಾಂದ್ರತೆಯು ಹೆಚ್ಚಾಗಿರುವ ಇಂಡಿಯಾ, ಚೈನಾ, ಆಫ್ರಿಕಾ ಮುಂತಾದದೇಶಗಳಲ್ಲಿ ಇವೆ: ಗ್ವಾಟೆಮಾಲಾ ದೇಶದಲ್ಲಿ ಒಂದು ಸಾವಿರ ಮಕ್ಕಳಿಗೂ 187 ಮಕ್ಕಳು 5 ವರ್ಷವಯಸ್ಸಾಗುವುದರೊಳಗೆ ಸಾಯುತ್ತಿವೆ; ಸಸಾರಜನಕಾಂಶ ಮತ್ತು ವಿಟಮಿನ್‌ಗಳನ್ನೆ ಸರಿಯಾಗಿ ಹೊಂದಿರುವ ಆಹಾರದ ಅಭಾವವೇ ಇದಕ್ಕೆ ಕಾರಣ: ಆರ್ಥಿಕ ದೃಷ್ಟಿಯಿಂದ ಹಿಂದುಳಿದಿರುವ ಅನೇಕ ದೇಶಗಳು ಪೌಷ್ಟಿಕ ಆಹಾರವನ್ನು ಉತ್ಪತ್ತಿಮಾಡುವ ಕಡೆಗೆ ತೀವ್ರ ಗಮನ ಕೊಡಬೇಕಾಗಿದೆ; ಆಯಾ ದೇಶಕ್ಕೆ ತಕ್ಕಂತೆ ಈ ಸಮಸ್ಯೆಯನ್ನು ಎದುರಿಸಬೇಕು; ಹಾಗೂ ಎದುರಿಸಲು ಸಾಧ್ಯ [ಆಹಾರ ವಿಜ್ಞಾನ]

ಅಬಾಧಿತ ಸುದ್ದಿ ಪ್ರಚಾರಕ್ಕೆ

ಕೊಲಂಬಿಯಾ, ಮಿಸ್ಸೌರಿ 4— ಪತ್ರಿಕೋದ್ಯಮಿಗಳು ತಮ್ಮ ಕರ್ತವ್ಯವನ್ನು ಸೂಕ್ತವಾಗಿ ನಿರ್ವಹಿಸಲಾಗುವಂತೆ, ಅಬಾಧಿತ ಸುದ್ದಿ ಪ್ರವಾಹಕ್ಕೆ ಅವಕಾಶ ಆಗಕ್ಕ ಎಂಬದಾಗಿ ಭಾರತದ ಪ್ರಕಾಶಕರೊಬ್ಬರು ಪ್ರಪಂಚ ಪತ್ರಿಕಾ ಕಾಂಗ್ರೆಸ್ಸಿನಲ್ಲಿ ಒತ್ತಾಯ ಪಡಿಸಿದರು — ಸ್ವತಂತ್ರವಾಗಿ ಕೆಲಸಮಾಡುವ ಅವಕಾಶ ಸುದ್ದಿಗಾರರಿಗೆ ಇರಬೇಕು ಎಂಬದಾಗಿ 'ಟೈಂಸ್ ಆಫ್ ಇಂಡಿಯಾ' ಪತ್ರಿಕೆಯ ಜನರಲ್ ಮ್ಯಾನೇಜರೂ ಪ್ರಕಾಶಕರೂ ಆದ ಜೆ ಸಿ. ಜೈನ್‌ರವರು 30 ರಾಷ್ಟ್ರಗಳಿಂದ ಬಂದ ಪತ್ರಿಕೋದ್ಯೋಗಿಗಳಿಗೆ ತಿಳಿಸಿದರು.

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾ ರ್ಮ ಸಿ

ಲೈಸೆನ್ಸ್‌ಡ್ ಔಷಧ ವ್ಯಾಪಾರಿ ಮೈಸೂರು

For Quality Printing

L. N. Press

Sivarampet, Mysore

ಪುರುಷರು ಅದಕ್ಕಾಗಿ ಮೋಹಪಡುತ್ತಾರೆ!

ಸ್ತ್ರೀಯರು ಅದನ್ನು ಮೆಚ್ಚುತ್ತಾರೆ!

ಅದು ಏನು!

ಗುಲಾಬಿ ಎಸಳಿನಂತೆ ಕೋಮಲವಾದ, ಸ್ವಚ್ಛವಾದ ಮತ್ತು ಮೃದುವಾದ ಚರ್ಮ. ಆರೋಗ್ಯದ ಉಜ್ವಲತೆ ಹೊಂದಿರುವ ಚರ್ಮ ಒಲುಮೆ ಕಾಣಿಸುವ ಮತ್ತು ವಿಜಯ ಹೊಂದುವ ಚರ್ಮವು ಇದೇ:

ಸೂರೆಮಾಡುವ ಸುಂದರ ಚರ್ಮ.

ಮೈಸೂರು ಗಂಧದ ಸಾಬೂನು

ಇವೆಲ್ಲವನ್ನೂ ನಿಮ್ಮ ನಿಲುಕಿನ ಹತ್ತಿರದಲ್ಲಿಯೇ ತರುತ್ತದೆ.

ಪ್ರತಿಯೊಬ್ಬರ ಅಚ್ಚುಮೆಚ್ಚಿನ ಈ ಸೌಂದರ್ಯ ಸಾಬೂನನ್ನು ಉಪಯೋಗಿಸಿ.

ಸರ್ಕಾರಿ ಸಾಬೂನು ಕಾರ್ಖಾನೆ

ಬೆಂಗಳೂರು 3.

— ಇವರಿಂದ ತಯಾರಿಸಲ್ಪಟ್ಟಿದು —

ವುಡ್‌ಲ್ಯಾಂಡ್ಸ್ ತೇಜಸ್ವಿ 6 ನೇ ವಾರ

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಸ ನೃತ್ಯಗಳು ಗೀವಾಕಲರಿನಲ್ಲಿ

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ— ನೂತನ್, ಕಿಶೋರ್, ಸ್ಮೃತಿಬಿಸ್ವಾಸ್ [ದಿನ 3 ಪ್ರದರ್ಶನಗಳು

ಅಪೆರಾ— ಜಯಪ್ರದ 2 ನೇ ವಾರ

ಮಾಧವಿ

ನಟವರ್ಗ— ಎಸ್. ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೊಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ಆಣೆ

ಪೋಷಕರು ರೂ 25, ಬೆಂಬಲಿಗರು ರೂ 10 (ಆಜೀವಕಾರಿ) ಮಾತ್ರ

Advertise in Goraksana and help the pious cause

ವಿಳಾಸ: ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed & Published by Dharma Prachara Nirata M. S. Krishna Rao, at the Satyavadi Press Chamarajapuram, Mysore